# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **2183(2449)**

ಸದಸ್ಯರ ಹೆಸರು : **ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು)**

ಉತ್ತರಿಸುವ ದಿನಾಂಕ : **27.03.2026**

ಉತ್ತರಿಸುವ ಸಚಿವರು : **ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಪ್ರಸ್ತುತ 2025-26ನೇ ಸಾಲಿನಲ್ಲಿ ಕೆಕೆಆರ್‌ಡಿಬಿಯಲ್ಲಿ ಯಾವ ಯಾವ ಕಾಮಗಾರಿಯು ಪ್ರಗತಿಯಲ್ಲಿದೆ; ಮತ್ತು ಯಾವ ಹಂತದಲ್ಲಿದೆ; ಸಂಪೂರ್ಣ ಮಾಹಿತಿ ನೀಡುವುದು; | 2025-26ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಒಟ್ಟು 2754 ಕಾಮಗಾರಿಗಳನ್ನು ಕೈಗೊಂಡಿದ್ದು, 29 ಕಾಮಗಾರಿಗಳು ಪೂರ್ಣಗೊಂಡಿದ್ದು, 682 ಕಾಮಗಾರಿಗಳು, ಪ್ರಗತಿಯಲ್ಲಿರುತ್ತವೆ. ಹಾಗೂ 2043 ಕಾಮಗಾರಿಗಳು ಇನ್ನು ಪ್ರಾರಂಭಿಸಬೇಕಾಗಿರುತ್ತದೆ. ಕಾಮಗಾರಿ ವಿವರಗಳು ಈ ಮುಂದಿನಂತಿವೆ.<br><br>ಅಕ್ಷರ ಆವಿಷ್ಕಾರ, ಆರೋಗ್ಯ ಆವಿಷ್ಕಾರ ಯೋಜನೆ, ವಸತಿ ನಿಲಯ ಶಾಲೆಗಳು, ವಿಶ್ವವಿದ್ಯಾಲಯಗಳಿಗೆ ಮೂಲಸೌಲಭ್ಯಗಳು, ರಸ್ತೆ & ಚರಂಡಿ, ರಸ್ತೆ & ಸಂಪರ್ಕ ಕುಡಿಯುವ ನೀರು ಸರಬರಾಜು, ಶುದ್ಧ ಕುಡಿಯುವ ನೀರಿನ ಘಟಕಗಳು, ಪ್ರವಾಸೋದ್ಯಮ, ಕ್ರೀಡೆ, ಸಾರಿಗೆ, ನಗರ/ಗ್ರಾಮೀಣ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳು, ಕೃಷಿ, ತೋಟಗಾರಿಕೆ, ಅರಣ್ಯೀಕರಣ, ಕೌಶಲ್ಯಾಭಿವೃದ್ಧಿ, ಸಣ್ಣ ಕೈಗಾರಿಕೆ ಹಾಗೂ ಇತರ ಮುಂದುವರೆದ ಅಭಿವೃದ್ಧಿ ಕಾಮಗಾರಿಗಳು |
| ಆ) | ಪ್ರಸ್ತುತ 2025-26ನೇ ಸಾಲಿನಲ್ಲಿ ಕೆಕೆಆರ್‌ಡಿಬಿಯಲ್ಲಿ ಕಾಮಗಾರಿಗಾಗಿ ಉಳಿದಿರುವ ಮೊತ್ತ ಎಷ್ಟು; ಉಳಿದ ಮೊತ್ತದಲ್ಲಿ ಸರ್ಕಾರದದಿಂದ ಯಾವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. | 2025-26ನೇ ಸಾಲಿನ ಆಯವ್ಯಯದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ರೂ. 5000 ಕೋಟಿಗಳ ಅನುದಾನವನ್ನು ಘೋಷಣೆ ಮಾಡಲಾಗಿದ್ದು, ಸದರಿ ಅನುದಾನಕ್ಕೆ ಕ್ರಿಯಾ ಯೋಜನೆಯನ್ನು ರೂಪಿಸಲು ಘನವೆತ್ತ ರಾಜ್ಯಪಾಲರ ಅನುಮೋದನೆ ಪಡೆದು, ಸರ್ಕಾರದ ಆದೇಶ ಸಂಖ್ಯೆ: ಪಿಡಿಎಸ್ 28 ಹೆಚ್‌ಕೆಡಿ 2025 ದಿನಾಂಕ: 25.07.2025ರಲ್ಲಿ ಆದೇಶ ಹೊರಡಿಸಿ ಅನುಮೋದನೆ ನೀಡಲಾಗಿದೆ.<br><br>2025-26ನೇ ಸಾಲಿನಲ್ಲಿ ಮಂಡಳಿಯು ರೂ.3465.25 ಕೋಟಿಗಳ ಅನುದಾನದ ಕಾಮಗಾರಿಗಳಿಗೆ ಮಂಡಳಿಯ ಹಂತದಲ್ಲಿ ಮಂಜೂರಾತಿ ನೀಡಿರುತ್ತದೆ. |

| | | |
|---|---|---|
| | | 2025-26ನೇ ಸಾಲಿನಲ್ಲಿ ಮಂಡಳಿಗೆ ಬಿಡುಗಡೆಯಾದ ರೂ.1500.00 ಕೋಟಿಗಳ ಅನುದಾನದಲ್ಲಿ ರೂ.688.86 ಕೋಟಿಗಳ ಅನುದಾನ ವೆಚ್ಚ ಮಾಡಲಾಗಿದ್ದು, ರೂ. 811.14 ಕೋಟಿಗಳ ಅನುದಾನ ಉಳಿಕೆಯಾಗಿರುತ್ತದೆ.<br><br>ಮಂಡಳಿಗೆ ಹಂಚಿಕೆಯಾದ ಅನುದಾನಕ್ಕೆ ಅನುಗುಣವಾಗಿ ಮಂಡಳಿಯಿಂದ ಕ್ರಿಯಾ ಯೋಜನೆಯನ್ನು ರೂಪಿಸಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಉಳಿಕೆ ಮೊತ್ತದಲ್ಲಿ ಸರ್ಕಾರದಿಂದ ಅನುಮೋದನೆಗೊಂಡ ಹಾಗೂ ಮುಂದುವರೆದ ಕಾಮಗಾರಿಗಳಿಗೆ ಬಳಕೆ ಮಾಡಲಾಗುತ್ತದೆ |
| (ಇ) | ಕಳೆದ 3 ವರ್ಷಗಳಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಯಾವ ಯಾವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ; (ಸಂಪೂರ್ಣ ಮಾಹಿತಿ ಜಿಲ್ಲಾವರು ಕಾಮಗಾರಿಯ ಹೆಸರು, ಪರವಾನಿಗೆ ಪಡೆದ ಗುತ್ತಿಗೆದಾರರ ಹೆಸರು, ದೂರವಾಣಿ ಸಂಖ್ಯೆ ಮತ್ತು ಬಿಡುಗಡೆಯಾದ ಅನುದಾನದ ಮೊತ್ತ ಸಹಿತ ಮಾಹಿತಿ ನೀಡುವುದು) | ಕಳೆದ 3 ವರ್ಷಗಳಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ವತಿಯಿಂದ ಕಲ್ಯಾಣ ಕರ್ನಾಟಕ ಭಾಗದಲ್ಲಿ ಸರ್ವತೋಮುಖ ಅಭಿವೃದ್ಧಿಗಾಗಿ ಅಕ್ಷರ ಆವಿಷ್ಕಾರ, ಆರೋಗ್ಯ ಆವಿಷ್ಕಾರ ಯೋಜನೆ, ವಸತಿ ನಿಲಯ ಶಾಲೆಗಳು, ವಿಶ್ವವಿದ್ಯಾಲಯಗಳಿಗೆ ಮೂಲಸೌಲಭ್ಯಗಳು, ರಸ್ತೆ & ಚರಂಡಿ, ರಸ್ತೆ & ಸಂಪರ್ಕ ಕುಡಿಯುವ ನೀರು ಸರಬರಾಜು, ಶುದ್ಧ ಕುಡಿಯುವ ನೀರಿನ ಘಟಕಗಳು, ಪ್ರವಾಸೋದ್ಯಮ, ಕ್ರೀಡೆ, ಸಾರಿಗೆ, ನಗರ/ಗ್ರಾಮೀಣ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳು, ಕೃಷಿ, ತೋಟಗಾರಿಕೆ, ಅರಣ್ಯೀಕರಣ, ಕೌಶಲ್ಯಾಭಿವೃದ್ಧಿ, ಸಣ್ಣ ಕೈಗಾರಿಕೆ ಹಾಗೂ ಇತರೆ ಮುಂದುವರೆದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.<br><br>ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. |

**ಸಂಖ್ಯೆ: ಪಿಡಿಎಸ್ 23 ಹೆಚ್‌ಕೆಡಿ 2026**

**(ಡಿ.ಸುಧಾಕರ್)**
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ ಸಚಿವರು.

# ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2183(2449)ರ ಅನುಬಂಧ

| Year | District | No. of Works | Approved Allocation | Expenditure |
|---|---|---|---|---|
| 2022-23 | Bidar | 486 | 38223.426 | 32524.646 |
| | Kalaburagi | 850 | 76407.278 | 62338.498 |
| | Yadgir | 425 | 27723.738 | 22848.567 |
| | Raichur | 592 | 48618.321 | 40503.766 |
| | Koppal | 625 | 37728.45 | 28780.012 |
| | Bellary | 203 | 11391.62 | 9743.462 |
| | KK Region | 10 | 18396.837 | 10808 |
| | Vijayanagar | 329 | 22451.95 | 19224.762 |
| | **2022-23 Total** | **3520** | **280941.62** | **226771.713** |
| 2023-24 | Bidar | 800 | 41571.295 | 32443.29 |
| | Kalaburagi | 1404 | 80618.382 | 54525.161 |
| | Yadgir | 1164 | 32233.541 | 25564.063 |
| | Raichur | 953 | 55580.255 | 39637.245 |
| | Koppal | 688 | 31951.775 | 24419.044 |
| | Bellary | 587 | 18796.455 | 15023.9 |
| | KK Region | 18 | 7472.884 | 6489.167 |
| | Vijayanagar | 653 | 31842.252 | 25075.713 |
| | **2023-24 Total** | **6267** | **300066.839** | **223177.583** |
| 2024-25 | Bidar | 834 | 56954.21 | 29885.381 |
| | Kalaburagi | 1291 | 127042.034 | 62654.104 |
| | Yadgir | 1049 | 44001.14 | 24174.72 |
| | Raichur | 985 | 73940.18 | 37371.83 |
| | Koppal | 621 | 53878.66 | 30698.907 |
| | Bellary | 453 | 32562.516 | 15344.385 |
| | KK Region | 13 | 44418 | 37223.605 |
| | Vijayanagar | 462 | 43077.62 | 27245.976 |
| | **2024-25 Total** | **5709** | **475874.36** | **264598.908** |
| Grand Total | | **15496** | **1056882.819** | **714548.204** |

ನಿರ್ದೇಶಕರು,
ಪ್ರದೇಶಾಭಿವೃದ್ಧಿ ಮಂಡಳಿ ವಿಭಾಗ
ಯೋಜನೆ. ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.